ಬೆಂಗಳೂರು ಮಹಾನಗರ ... ಹೆಬ್ಬಾಳ ವಿಭಾಗ, ಕ್ವೀನ್ಸ್ ರಸ್ತೆ, ಬೆಂಗಳೂರು- ಕಾರ್ಯಪಾಲಕ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಕಾ.ಅ(ಹೆ)/ಪಿ.ಆರ್/ 11 /2013-14

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಹೆಬ್ಬಾಳ ಉಪವಿಭಾಗ, ಕ್ವೀನ್ಸ್ ರಸ್ತೆ, ಬೆಂಗಳೂರು
ದಿನಾಂಕ: 30-09-2013

## ಸರಬರಾಜು ಆದೇಶ

ವಿಷಯ: ವಾರ್ಡ್ ಸಂಖ್ಯೆ: 21 (ಹೆಬ್ಬಾಳ) ರಲ್ಲಿ ಘನತ್ಯಾಜ್ಯ ವಸ್ತು ವಿಲೇವಾರಿ ನಿರ್ವಹಣೆ ಮತ್ತು ವಿಲೇವಾರಿ ಕಾರ್ಯಕ್ಕೆ ಪೌರಕಾರ್ಮಿಕರನ್ನು ಹಾಗು ವಾಹನಗಳನ್ನು ಸರಬರಾಜು ಮಾಡುವ ಬಗ್ಗೆ.

ಉಲ್ಲೇಖ: ಸಹಾಯಕ ಕಾರ್ಯಪಾಲಕ ಅಭಿಯಂತರರು,ಹೆಬ್ಬಾಳ ಉಪ ವಿಭಾಗ, ಬೆಂಗಳೂರು ರವರ ಕೊಟೇಶನ್ ಪ್ರಕಟಣೆ ಸಂಖ್ಯೆ: ಸಕಾಅ(ಹೆ)/ಪಿಆರ್/51/2013-14,ದಿ:27-09-13

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, **ವಾರ್ಡ್ ಸಂಖ್ಯೆ: 21 (ಹೆಬ್ಬಾಳ)** ರಲ್ಲಿ ಇಲಾಖಾ ವತಿಯಿಂದ ಘನತ್ಯಾಜ್ಯ ನಿರ್ವಹಣೆ ಮತ್ತು ವಿಲೇವಾರಿ ನಿರ್ವಹಿಸಲು ಪೌರಾಕಾರ್ಮಿಕರನ್ನು ಹಾಗು ವಾಹನಗಳನ್ನು ಸರಬರಾಜು ಮಾಡಲು ದಿನಾಂಕ: 27-09-2013 ರಂದು ಕರೆಯಲಾದ ಕೊಟೇಶನ್ ಪ್ರಕಟಣೆಯಲ್ಲಿ ಪ್ರತಿ ಮಾಹೆಗೆ ಮೆ. ಷೋಡಶಿ ಎಂಟರ್‌ಪ್ರೈಸಸ್ ರವರು ನಮೂದಿಸಿದ ದರ ರೂ.**11,29,765/-**( ಹನ್ನೊಂದು ಲಕ್ಷ ಇಪ್ಪತ್ತೊಂಬತ್ತು ಸಾವಿರದ ಏಳು ನೂರ ಎಪ್ಪತ್ತೈದು ರೂಪಾಯಿಗಳು)ಉಳಿದ ದರಗಳಿಗಿಂತ ಕಡಿಮೆಯಿದ್ದು, ಸದರಿ ದರಗಳು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾಗಿರುತ್ತದೆ. ಅದರಂತೆ ದಿನಾಂಕ:01-10-2013 ರಿಂದ ಮುಂದಿನ ಆದೇಶದವರೆಗೆ ಕೆಳಕಂಡ ಷರತ್ತುಗಳ್ವಯಿಸಿ ಅಗತ್ಯವಿರುವ ಪೌರಕಾರ್ಮಿಕರು ಮತ್ತು ವಾಹನಗಳನ್ನು ಕೂಡಲೇ ಸರಬರಾಜುಗೊಳಿಸಲು ತಿಳಿಸಿದೆ.

| Sl No | Particulars | Quantity | Unit Rate in Rs | Total Cost in Rs |
|---|---|---|---|---|
| 1 | Auto tippers with driver and helper | 15 | 28,511/- | 4,27,665/- |
| 2 | Push Cart with helper | 3 | 9,330/- | 27,990/- |
| 3 | Tipper Lorry with driver and 4 helpers | 2 | 93,476/- | 1,86,952/- |
| 5 | Pourakarmikas with material including push carts for street sweeping | 39 | 9,592/- | 3,74,088/- |
| 6 | Pourakarmikas with material including push cartsfor open area cleaning | 10 | 9,330/- | 93,300/- |
| 7 | Supervisors | 2 | 9,885/- | 19,770/- |
| Total Cost | | | | 11,29,765/- |

ಷರತ್ತುಗಳು:

1) ಸರಬರಾಜು ಆದೇಶ ತಲುಪಿದ ಒಂದು ವಾರದೊಳಗಾಗಿ ಕಾರ್ಮಿಕರ ಪರವಾನಗಿ ಮತ್ತು ಇಎಸ್ಐ, ಪಿಎಫ್ ಹಾಗು ವಾಹನಗಳ ನೊಂದಾಯಿತ ದಾಖಲಾತಿಗಳನ್ನು ಕಛೇರಿಗೆ ಸಲ್ಲಿಸುವುದು. ಹಾಗು ಪ್ರತಿ ಮಾಹೆ ಇಎಸ್ಐ ಮತ್ತು ಪಿಎಫ ಪಾವತಿಸಿ ದಾಖಲಾತಿ ಒದಗಿಸುವುದು.

2)ಸರಬರಾಜುಗೊಳಿಸುವ ಪೌರಕಾರ್ಮಿಕರಗಳ ಜೊತೆಯಲ್ಲಿ ಅಗತ್ಯವಿರುವ ಸಲಕರಣೆಗಳನ್ನು ನೀಡುವುದು.

3) ವಾಹನ ಚಾಲಕರು ಬಾರಿ ವಾಹನ ಚಾಲನೆಯ ಪರವಾನಗಿ ಕಡ್ಡಾಯವಾಗಿ ಹೊಂದಿರತಕ್ಕದ್ದು.

4) ನೀವು ಸರಬರಜುಗೊಳಿಸಿರುವ ಪೌರಕಾರ್ಮಿಕರರನ್ನು ಯಾವುದೇ ಕಾರಣಕ್ಕೂ ಬಿ.ಬಿ.ಎಂ.ಪಿ ನೌಕರರೆಂದು ಪರಿಗಣಿಸತಕ್ಕದಲ್ಲ.

5) ನೀವು ಸರಬರಾಜುಗೊಳಿಸಿದ ವಾಹನಗಳು ಉತ್ತಮ ಸ್ಥಿತಿಯಲ್ಲಿರಬೇಕು ಹಾಗು ಸದರಿ ವಾಹನಗಳ ರಿಪೇರಿಯ ಜವಾಬ್ದಾರಿ ನಿಮ್ಮದೇ ಆಗಿರುತ್ತದೆ.

ಕಾರ್ಯಪಾಲಕ ಅಭಿಯಂತರರು,
ಹೆಬ್ಬಾಳ ವಿಭಾಗ
ಬೃಹತ್ ಬೆಂಗಳೂರು ಮಹಾನಗರಪಾಲಿಕೆ.

ಗೆ,

ಮೆ. ಷೋಡಶಿ ಎಂಟರ್‌ಪ್ರೈಸಸ್,
#329, 9 ನೇಅಡ್ಡ ರಸ್ತೆ, 22 ನೇ ಮುಖ್ಯರಸ್ತೆ
ಎಚ್.ಎಸ್.ಆರ್ ಲೇಔಟ್,ಬೆಂಗಳೂರು

ಪ್ರತಿಯನ್ನು:

1) ಮಾನ್ಯ ಆಯುಕ್ತರು,ಬಿ.ಬಿ.ಎಂ.ಪಿ ರವರ ಆಪ್ತ ಕಾರ್ಯಾಲಕ್ಕೆ ಮಾಹಿತಿಗಾಗಿ ಸಲ್ಲಿಸಿದೆ.
2) ಮಾನ್ಯ ಅಪರ ಆಯುಕ್ತರು, ಪೂರ್ವರವರ ಅವಗಾಹನೆಗೆ ಸಲ್ಲಿಸಿದೆ.
3) ಸಹಾಯಕ ನಿಯಂತ್ರಕರು(ಹಣಕಾಸು), ಪೂರ್ವವಲಯ ರವರ ಮಾಹಿತಿ ಹಾಗು ಸೂಕ್ತ ಕ್ರಮಕ್ಕಾಗಿ.
4) ಕಛೇರಿ ಕಡತಕ್ಕೆ.

21/12/13.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಕಾ.ಅ(ಹೆ)/ಪಿ.ಆರ್/ 15 /2013-14

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಹೆಬ್ಬಾಳ ವಿಭಾಗ, ಜೆ.ಸಿ.ನಗರರಸ್ತೆ, ಬೆಂಗಳೂರು
ದಿನಾಂಕ: 10 -09-2014

### ಪರಿಷ್ಕೃತ ಸರಬರಾಜು ಆದೇಶ

ವಿಷಯ: ವಾರ್ಡ್ ಸಂಖ್ಯೆ: 21 (ಹೆಬ್ಬಾಳ) ದಲ್ಲಿ ಘನತ್ಯಾಜ್ಯ ವಸ್ತು ವಿಲೇವಾರಿ ನಿರ್ವಹಣೆ ಮತ್ತು ವಿಲೇವಾರಿ ಕಾರ್ಯಕ್ಕೆ ಪರಿಷ್ಕೃತ ಸರಬರಾಜುಆದೇಶ ನೀಡುವ ಬಗ್ಗೆ.

ಉಲ್ಲೇಖ: 1) ಈ ಕಛೇರಿಯ ಸಮ ಸಂಖ್ಯೆ ದಿನಾಂಕ:30-09-2013
2) ಮಾನ್ಯ ವಿಶೇಷ ಆಯುಕ್ತರು(ಘ.ತ್ಯಾ.ನಿ)ರವರು ಕಡತ ಸಂಖ್ಯೆ:ಸಕಾಅ(ಹೆ)/ಪಿಆರ್ 26/14-15ರ ಕಂಡಿಕೆ( 17) ಅನುಮೋದಿಸಿರುವಂತೆ.
3) ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: KAC 152 LWA 2008, Dt: 21/02/2011

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, **ವಾರ್ಡ್ ಸಂಖ್ಯೆ: 21 (ಹೆಬ್ಬಾಳ)** ರಲ್ಲಿ ಇಲಾಖಾ ವತಿಯಿಂದ ಘನತ್ಯಾಜ್ಯ ನಿರ್ವಹಣೆ ಮತ್ತು ವಿಲೇವಾರಿ ನಿರ್ವಹಿಸಲು ಪೌರಾಕಾರ್ಮಿಕರನ್ನು ಹಾಗು ವಾಹನಗಳನ್ನು ಸರಬರಾಜು ಮಾಡಲು **ಮೆ. ಷೋಡಶಿ ಎಂಟರ್‌ಪ್ರೈಸಸ್** ರವರು ನಮೂದಿಸಿದ ದರ **ರೂ.11,29,765/-( ಹನ್ನೊಂದು ಲಕ್ಷ ಇಪ್ಪತ್ತೊಂಬತ್ತು ಸಾವಿರದ ಏಳು ನೂರ ಎಪ್ಪತ್ತೈದು ರೂಪಾಯಿಗಳು)** ಉಲ್ಲೇಖಿತ ಪತ್ರ ಸಂಖ್ಯೆ(1) ರಂತೆ ಸರಬರಾಜು ಆದೇಶ ನೀಡಲಾಗಿರುತ್ತದೆ.

ಮುಂದುವರೆದು, ಉಲ್ಲೆಖಿತ ಪತ್ರ(3) ರಂತೆ ಕಾರ್ಮಿಕ ಇಲಾಖೆಯ ಅಧಿಸೂಚನೆಯನ್ವಯ ದಿನಾಂಕ:1-04-2014 ರಿಂದ ಪೌರಕಾರ್ಮಿಕರು. ವಾಹನ ಚಾಲಕರು ಮತ್ತು ಮೇಲ್ವಿಚಾರಕರುಗಳಿಗೆ ಹೆಚ್ಚಾಗಿರುವ ತುಟ್ಟಿ ಭತ್ಯೆ(ಇ.ಎಸ್.ಐ ಮತ್ತು ಪಿ.ಎಫ್ ಒಳಗೊಂಡಂತೆ) ಗಳನ್ನು ನೀಡಲು ಉಲ್ಲೇಖ(2) ರಲ್ಲಿ ಅನುಮೋದನೆಗೊಂಡಿರುತ್ತದೆ.

ಈ ಹಿಂದೆ ನೀಡಲಾಗಿರುವ ಸರಬರಾಜು ಅದೇಶದ ಷರತ್ತುಗಳು ಹಾಗು ಈ ಕೆಳಕಂಡ ಷರತ್ತುಗಳಿಗೆ ಒಳ ಪಡಿಸಿ ರೂ. **12,23,859/-(ಹನ್ನೆರಡು ಲಕ್ಷ ಇಪ್ಪತ್ತಮೂರು ಸಾವಿರದ ಎಂಟು ನೂರ ಐವತ್ತೊಂಭತ್ತು ರೂಪಾಯಿ)**ಗಳಿಗೆ ಪರಿಷ್ಕೃತ ಸರಬರಾಜು ಆದೇಶವನ್ನು ನೀಡಲಾಗಿದೆ.

| Sl No | Particulars | Quantity | Approved Unit Rate in Rs | Total Cost in Rs as per Work order | Difference of DA as applicable from 1-04-2014 | Total Cost in Rs as per Revised Work order |
|---|---|---|---|---|---|---|
| 1 | Auto tippers with driver and | 15 | 28,511/- | 4,27,665/- | 30,030/- | 4,57,695/- |

| | | | | | | |
|---|---|---|---|---|---|---|
| | helper | | | | | |
| 2 | Push Cart helper | 3 | 9,330/- | 27,990/- | 3,003/- | 30,993/- |
| 4 | Tipper Lorry driver and helpers | 2 | 93,476/- | 1,86,952/- | 10,010/- | 1,96,962/- |
| 5 | Pourakarmikas for street sweeping | 39 | 9,592/- | 3,74,088/- | 39,039/- | 4,13,127/- |
| 6 | Pourakarmikas for open area cleaning | 10 | 9,330/- | 93,300/- | 10,010/- | 1,03,310/- |
| 7 | Supervisors | 2 | 9,885/- | 19,770/- | 2,002/- | 21,772/- |
| **Total Cost** | | | | **11,29,765/-** | **94,094/-** | **12,23,859/-** |

ಷರತ್ತುಗಳು:

1) ಸರಬರಾಜು ಆದೇಶದಲ್ಲಿ ನೀಡಿರುವಂತೆ ಹೆಚ್ಚುವರಿ ತುಟ್ಟಿಭತ್ಯೆ ಮತ್ತು ವ್ಯತ್ಯಾಸದ ಇಎಸ್ಐ, ಪಿಎಫ್‌ಗಳನ್ನು ಪಾವತಿಸಿ ದಾಖಲಾತಿಗಳನ್ನು ಕಛೇರಿಗೆ ಸಲ್ಲಿಸುವುದು.

ಕಾರ್ಯಪಾಲಕ ಅಭಿಯಂತರರು,
ಹೆಬ್ಬಾಳ ವಿಭಾಗ
ಬೃಹತ್ ಬೆಂಗಳೂರು ಮಹಾನಗರಪಾಲಿಕೆ.

ಗೆ,

ಮೆ. ಷೋಡಶಿ ಎಂಟರ್‌ಪ್ರೈಸಸ್,
#329, 9 ನೇಅಡ್ಡ ರಸ್ತೆ, 22 ನೇ ಮುಖ್ಯರಸ್ತೆ
ಎಚ್.ಎಸ್.ಆರ್ ಲೇಔಟ್,ಬೆಂಗಳೂರು

ಪ್ರತಿಯನ್ನು:

2) ಮಾನ್ಯ ಆಯುಕ್ತರು,ಬಿ.ಬಿ.ಎಂ.ಪಿ ರವರ ಆಪ್ತ ಕಾರ್ಯಾಲಕ್ಕೆ ಮಾಹಿತಿಗಾಗಿ ಸಲ್ಲಿಸಿದೆ.
3) ಮಾನ್ಯ ಅಪರ ಆಯುಕ್ತರು, ಪೂರ್ವರವರ ಅವಗಾಹನೆಗೆ ಸಲ್ಲಿಸಿದೆ.
4) ಸಹಾಯಕ ನಿಯಂತ್ರಕರು(ಹಣಕಾಸು), ಪೂರ್ವವಲಯ ರವರ ಮಾಹಿತಿ ಹಾಗು ಸೂಕ್ತ ಕ್ರಮಕ್ಕಾಗಿ.
5) ಕಛೇರಿ ಕಡತಕ್ಕೆ.